<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.287/2017

ಚಾಸಾ-5 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 24.02.2020

| | | |
|---|---|---|
| ಹೆಸರು | ಃ | ಲಕ್ಷಿಪುತ್ರ ಜಿಡಗಿ |
| ತಂದೆ ಹೆಸರು | ಃ | ಶಿವಲಿಂಗಪ್ಪ |
| ವಯಸ್ಸು | ಃ | 38-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮಾಶಾಳ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಮೃತ ಕಸ್ತೂರಿಬಾಯಿ ಗೊತ್ತು. ದಿನಾಂಕ 27.01.2017 ರಂದು ಮಾಶಾಳ-ಹೈದ್ರಾ ರಸ್ತೆಯಲ್ಲಿ ಅಪಘಾತವಾಗಿದ್ದು ಅವರು ಮೃತಪಟ್ಟಿರುತ್ತಾರೆ. ಅಲ್ಲಿಗೆ ಹೋಗಿ ನೋಡಲಾಗಿ ಮೋಟರ ಸೈಕಲ್ ಹಾಗೂ ಲಾರಿ ನಡುವೆ ಅಪಘಾತವಾಗಿತ್ತು ನನ್ನ ಹಾಗೂ ಚಾಸಾ -4 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿ ಒಂದು ಘಟನಾ ಸ್ಥಳದ ಹಾಗೂ ಎರಡು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಗಳನ್ನು ಈಗಾಗಲೇ ನಿಪಿ-10 ರಿಂದ 12 ಎಂದು ಗುರುತಿಸಿದ್ದು, ಅದರ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-10 ಬಿ ರಿಂದ 12 ಬಿ ಎಂದು ಗುರುತಿಸಲಾಯಿತು . ಸಾಕ್ಷಿ ಅಪಘಾತಕ್ಕೀಡಾದ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ನಿಪಿ -1 ರಿಂದ 8 ಎಂದು ಗುರುತಿಸಲಾಗಿದೆ. ಒಂದು ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿದ್ದು ಮತ್ತೊಂದು ಠಾಣೆಯಲ್ಲಿ ಮಾಡಿರುತ್ತಾರೆ. ಪಂಚನಾಮೆಗಳನ್ನು ಮಾಡಿದ ದಿನಾಂಕ ಮತ್ತು ಸಮಯ ನೆನಪಿಲ್ಲ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 14.02.2017 ರಂದು ಸಾಯಂಕಾಲ 5 ರಿಂದ 6.30 ಗಂಟೆವರೆಗೆ ಫಿರ್ಯಾದಿ ತೋರಿಸಿದ ಘಟನಾ ಸ್ಥಳವನ್ನು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಅದೇ ದಿವಸ ಸಾಯಂಕಾಲ 7 ರಿಂದ 7.30 ಗಂಟೆಗೆ ಮಾಶಾಳ ಪೋಲಿಸ್ ಠಾಣೆ ಆವರಣದಲ್ಲಿ ಚಾಸಾ-1 ಹಾಜರುಪಡಿಸಿದ ದ್ವಿ ಚಕ್ರ ವಾಹನ ನಂ.ಎಂಹೆಚ್-13/ಬಿಜೆ-0609 ನ್ನು ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ದಿನಾಂಕ 18.02.2017 ರಂದು ನಮ್ಮನ್ನು ಠಾಣೆಗೆ ಕರೆಸಿ ಲಾರಿಯನ್ನು ನಮ್ಮ ಸಮಕ್ಷಮ ರಾತ್ರಿ 7 ರಿಂದ 7.30 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

ಪಾಟಿ ಸವಾಲುಃ ಆರೋಪಿತನ ಪರ ಶ್ರೀ ಪಿಬಿಪಿ ವಕೀಲರಿಂದ

ಘಟನಾ ಸ್ಥಳದ ಪೂರ್ವಕ್ಕೆ ಮಾಶಾಳ ರಸ್ತೆ, ಪಶ್ಚಿಮಕ್ಕೆ ಹೊಲಗಳು, ಉತ್ತರಕ್ಕೆ ತೋಟ, ದಕ್ಷಿಣಕ್ಕೆ ಹೊಲಗಳಿವೆ. ವಾಹನಗಳು ಜಪ್ತಿಪಡಿಸಿಕೊಂಡ ಸ್ಥಳದ ಚೆಕಬಂದಿ ಗೊತ್ತಿಲ್ಲ. ಚಾಸಾ-1 ನನ್ನ ಪಕ್ಕದ ಮನೆಯವರಿರುತ್ತಾರೆ.

ದಿನಾಂಕ 14.02.2017 ರಂದು ಸಾಯಂಕಾಲ 5 ರಿಂದ 6.30 ಗಂಟೆವರೆಗೆ ಫಿರ್ಯಾದಿ ತೋರಿಸಿದ ಘಟನಾ ಸ್ಥಳವನ್ನು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಅದೇ ದಿವಸ ಸಾಯಂಕಾಲ 7 ರಿಂದ 7.30 ಗಂಟೆಗೆ ಮಾಶಾಳ ಪೋಲಿಸ್ ಠಾಣೆ ಆವರಣದಲ್ಲಿ ಚಾಸಾ-1 ಹಾಜರುಪಡಿಸಿದ ದ್ವಿ ಚಕ್ರ ವಾಹನ ನಂ.ಎಂಹೆಚ್-13/ಬಿಜೆ-0609 ನ್ನು ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡು ನಂತರ ದಿನಾಂಕ 18.02.2017 ರಂದು ನಮ್ಮನ್ನು ಠಾಣೆಗೆ ಕರೆಸಿ ಲಾರಿಯನ್ನು ನಮ್ಮ ಸಮಕ್ಷಮ ರಾತ್ರಿ 7 ರಿಂದ 7.30 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಪಂಚನಾಮೆ ಮಾಡದಿದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಅಫಜಲಪೂರ

ಸಿಸಿ ನಂ.287/2017

ಚಾಸಾ-6 ಪ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 24.02.2020

| | | |
|---|---|---|
| ಹೆಸರು | ಃ | ಶ್ರೀಮಂತ ರೂಗಿ |
| ತಂದೆ ಹೆಸರು | ಃ | ಈರಣ್ಣ |
| ವಯಸ್ಸು | ಃ | 61-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹೈದ್ರಾ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಚಾಸಾ-1 ಮತ್ತು ಮೃತ ಕಸ್ತೂರಿಬಾಯಿ ಗೊತ್ತು. ದಿನಾಂಕ 17.01.2017 ರಂದು ಮಾಶಾಳ-ಹೈದ್ರಾ ರಸ್ತೆಯಲ್ಲಿ ಹಿಪ್ಪರಗಿ ರವರ ಹೊಲದ ಹತ್ತಿರ ನಾನು ಮಾತನಾಡುತ್ತಾ ನಿಂತಾಗ ಅಪಘಾತವಾಗಿದ್ದು ಕಸ್ತೂರಿಬಾಯಿ ಮೃತಪಟ್ಟಿರುತ್ತಾರೆ. ಆರೋಪಿತನು ತನ್ನ ಲಾರಿಯನ್ನು ಮಾಶಾಳ ಕಡೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯಲ್ಲಿರುವ ತಗ್ಗನ್ನು ತಪ್ಪಿಸಲು ಹೋಗಿ ಮೃತ ಕಸ್ತೂರಿಬಾಯಿಗೆ ಹಾಗೂ ದ್ವಿ ಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ. ಸಾಕ್ಷಿ ಅಪಘಾತಕ್ಕೀಡಾದ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ನಿಪಿ-1 ರಿಂದ 8 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಅಪಘಾತವಾದ ನಂತರ ಮೃತ ಕಸ್ತೂರಿಬಾಯಿ ರವರನ್ನು ಅಕ್ಕಲಕೋಟದ ಆಸ್ಪತ್ರೆಯಲ್ಲಿ ದಾಖಲು ಮಾಡಿರುತ್ತೇವೆ. ಅಪಘಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ. ನಂತರ ಆರೋಪಿತನ ಹೆಸರು ಸೈಪನ ಬಂದರವಾಡ ಎಂದು ಠಾಣೆಗೆ ಕರೆಸಿದಾಗ ಗೊತ್ತಾಗಿರುತ್ತದೆ. ಈ ಬಗ್ಗೆ ಪುರವಣಿ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತನ ಪರ ಶ್ರೀ ಪಿಬಿಪಿ ವಕೀಲರಿಂದ

ಮಾಶಾಳ-ಹೈದ್ರಾ ರಸ್ತೆ ಕಚ್ಚಾ ರಸ್ತೆಯಿತ್ತು ಎಂದರೆ ಸರಿ. ರಸ್ತೆಯ ದಕ್ಷಿಣಕ್ಕೆ ಕಸ್ತೂರಿಬಾಯಿ ಹಾಗೂ ದ್ವಿ ಚಕ್ರ ವಾಹನ ನಿಂತಿತ್ತು. ರಸ್ತೆಯ ಉತ್ತರಕ್ಕೆ ದ್ವಿ ಚಕ್ರ ವಾಹನ ನಡೆಸುತ್ತಿದ್ದ ವ್ಯಕ್ತಿ ನಿಂತಿದ್ದನು. ಮಾಶಾಳ-ಹೈದ್ರಾ ರಸ್ತೆ ಪೂರ್ವದಿಂದ ಪಶ್ಚಿಮಕ್ಕಿದೆ. ಅಪಘಾತವಾದ ನಂತರ ಮೃತ ಕಸ್ತೂರಿಬಾಯಿಯವರ ಬಗ್ಗೆ ವಿಚಾರಿಸಿರುತ್ತೇನೆ.

ದಿನಾಂಕ 17.01.2017 ರಂದು ಮಾಶಾಳ-ಹೈದ್ರಾ ರಸ್ತೆಯಲ್ಲಿ ಹಿಪ್ಪರಗಿ ರವರ ಹೊಲದ ಹತ್ತಿರ ನಾನು ಮಾತನಾಡುತ್ತಾ ನಿಂತಾಗ ಅಪಘಾತವಾಗಿದ್ದು ಆರೋಪಿತನು ತನ್ನ ಲಾರಿಯನ್ನು ಮಾಶಾಳ ಕಡೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯಲ್ಲಿರುವ ತಗ್ಗನ್ನು ತಪ್ಪಿಸಲು ಹೋಗಿ ಮೃತ ಕಸ್ತೂರಿಬಾಯಿಗೆ ಹಾಗೂ ದ್ವಿ ಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದು ಅಪಘಾತವಾದ ನಂತರ ಮೃತ ಕಸ್ತೂರಿಬಾಯಿ ರವರನ್ನು ಅಕ್ಕಲಕೋಟದ ಆಸ್ಪತ್ರೆಯಲ್ಲಿ ದಾಖಲು ಮಾಡಿರುದ್ದು ಅಪಘಾತವು ಆರೋಪಿತನ ತಪ್ಪಿನಿಂದ ಆಗಿದ್ದು ಘಟನೆ ಕುರಿತು ಹೇಳಿಕೆ ಹಾಗೂ ಮರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ . ಆರೋಪಿಗೂ ಹಾಗೂ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ